# ವಾರ್ಡ್ ಸಭೆ ಸಂಖ್ಯೆ.24

ದಿನಾಂಕ:.18.12.2021 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
2. ಶ್ರೀ ಜಯಪಾಲ್ ಸದಸ್ಯರು.
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀಮತಿ ಪ್ರೇಮ ಸದಸ್ಯರು.
5. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ನಾಗೇಂದ್ರ ಸದಸ್ಯರು.
9. ಶ್ರೀ ಗೋಪಿ ಸದಸ್ಯರು.
10. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
14. ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆಯ ಅಧಿಕಾರಿ.
15. ನಂದಿನಿ ಲೇಔಟ್ ಪೋಲೀಸ್ ಠಾಣೆಯ ಅಧಿಕಾರಿ.
16. ಶ್ರೀ ದರ್ಶನ್ ಗಣಕಯಂತ್ರ ನಿರ್ವಾಹಕರು, ಶಂಕರ್‌ನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
17. ಶ್ರೀ ದಿಲೀಪ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸದಸ್ಯರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರಕ್ಕೆ ಸಂಬಂಧಿಸಿದವರು ಮಹಿತಿ ನೀಡಿದರು. ನಾಗೇಂದ್ರ ಸದಸ್ಯರು ರವರು ವ್ಯಾಕ್ಸಿನ ನೀಡುತ್ತಿರುವ ಬಗ್ಗೆ ಕಮಿಟಿ ಸಭೆಯ ವಾಟ್ಸ್ಆಪ್ ಗ್ರೂಪ್‌ನಲ್ಲಿ ತಿಳಿಸಲು ಕೋರಿದರು. | – |
| 4. | ಸಾರ್ವಜನಿಕರು ಸ್ವತ್ತಿನ ಸಂಖ್ಯೆ.144, 10ನೇ ಮುಖ್ಯರಸ್ತೆ, ಇಲ್ಲಿ ಅನಾಮಿಕರು ಕಸವನ್ನು ಎಸೆಯುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಕಿರಯ ಆರೋಗ್ಯ ಪರಿವೀಕ್ಷಕರಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 5. | ಕಾಯದರ್ಶಿಗಳು ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 12 ಬ್ಲಾಕ್ ಸ್ಪಾಟ್‌ಗಳು ಇದ್ದು ಸದರಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವುದರ ಬಗ್ಗೆ ಸಹಾಯಕ ಕಾರ್ಯಪಾಲಕರ ಅಭಿಯಂತರರು (ಘನ ತ್ಯಾಜ್ಯ) ಹಾಗೂ ಮಾರ್ಷಲ್ ಮೇಲ್ವಿಚಾರಕರೊಂದಿಗೆ ಸಮನ್ವಯ ಸಾಧಿಸಿಕೊಂಡು ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಯೋಜನೆ ರೂಪಿಸಿ ಮುಂದಿನ ಸಭೆಗೆ ತಿಳಸಲು ತಿರ್ಮಾನಿಸಲಾಗಿರುತ್ತದೆ. ಆದ್ದರಿಂದ ಬ್ಲಾಕ್ ಸ್ಪಾಟ್‌ಗಳು ತೆರವುಗೊಳಿಸುವ ಯೋಜನೆಯನ್ನು ನೀಡುವಂತೆ ಕೋರಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಸೋಮವಾರ ನೀಡಲಾಗುತ್ತದೆ ಎಂದು ತಿಳಿಸಿದರು. ಸಭೆಯಲ್ಲಿ ಕಾರ್ಯದರ್ಶಿಗಳು ಹಾಗೂ ಸದಸ್ಯರು ರವರು ಪ್ರತಿ ಸಭೆಯಲ್ಲಿ ಇದೇ ಉತ್ತರ ನೀಡುತ್ತಿರುತ್ತಾರೆ ಆದ್ದರಿಂದ ಮೇಲಾಧಿಕಾರಿಗಳಿಗೆ ಪತ್ರ ಬರೆಯಲು ತಿರ್ಮಾನಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ಮಹಾಲಕ್ಷ್ಮೀಪುರ ವಿಭಾಗ |

Scanned with CamScanner

| | | |
|---|---|---|
| 6. | ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವಿಲೇವಾರಿ ಮಾಡದೆ ಹಾಗೆಯೇ ಉಳಿಸಿಕೊಂಡು ರಾತ್ರಿ ವೇಳೆಯಲ್ಲಿ ಮಾರುಕಟ್ಟೆಯಿಂದ ಹೊರಗಡೆ ಸಾರ್ವಜನಿಕ ಜಾಗಗಳಲ್ಲಿ ಸುರಿಯುತ್ತಿರುವ ಬಗ್ಗೆ ಕೃಷಿ ಉತ್ಪನ್ನ ಮಾರುಕಟ್ಟೆಯ ಕಾರ್ಯಧರ್ಶಿಗಳಿಗೆ ಪತ್ರ ಬರೆಯಲಾಗಿರುತ್ತದೆ ಎಂದು ಸಭೆಗೆ ತಿಳಿಸಲಾಯಿತು ಹಾಗೂ ಎ.ಪಿ.ಎಂ.ಸಿಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದೀರ ಎಂದು ಕೇಳಿದರು. ಆದರೆ ಸಭೆಗೆ ಅಧಿಕಾರಿಗಳು ಹಾಜರಿರಲಿಲ್ಲ ಆದ್ದರಿಂದ ಮತ್ತೊಮ್ಮೆ ಪತ್ರ ಬರೆಯಲು ಸಭೆಯಲ್ಲಿ ತಿರ್ಮಾನಿಸಿದರು. | ಕಾರ್ಯದರ್ಶಿಗಳು ಎ.ಪಿ.ಎಂ.ಸಿ ಯಶವಂತಪುರ |
| 7. | ಫುಡ್ ಗೋಡನ್ ಬಳಿ ಘನ್ಯತ್ಯಾಜ್ಯ ಸಾಗಿಸುವ ವಾಹನಗಳು ನಿಲ್ಲಿಸಿ ಲಿಚ್ಚಡ್ ಸೋರಿಕೆಯಾಗಿ ರಸ್ತೆಗಳು ದುರ್ವಾಸನೆಯಿಂದ ಕೂಡಿ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಸದರಿ ವಾಹನಗಳನ್ನು ಅಲ್ಲಿಂದ ತೆರವುಗೊಳಿಸಲು ಹಾಗೂ ಬೆಲ್ ಅಪಾರ್ಟ್‌ಮೆಂಟ್ ರಸ್ತೆಯಲ್ಲಿ ವಹಾನಗಳನ್ನು ನಿಲ್ಲಿಸುತ್ತಿರುತ್ತಾರೆ ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಆದ್ದರಿಂದ ಸಂಬಂದಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ಕಾರ್ಯದರ್ಶಿಗಳು ತಿಳಿಸಿದರು. | ಯಶವಂತಪುರ, ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ |
| 8. | ಶ್ರೀ ನಾಗೇಂದ್ರ ಸದಸ್ಯರು ರವರು ಎ.ಪಿ.ಎಂ.ಸಿ ಗೇಟ್, ಚಿಕ್ಕೇಗೌಡ ಚೌಟ್ರಿ ಹಿಂಭಾಗದ ಗೇಟ್ ಮುಂಭಾಗದ ಸ್ಥಳವು ನಂದಿನಿ ಲೇಔಟ್ ಪೋಲೀಸ್‌ಠಾಣೆ, ಮಹಾಲಕ್ಷ್ಮೀ ಲೇಔಟ್ ಪೋಲೀಸ್ ಠಾಣೆ ಮತ್ತು ಎ.ಪಿ.ಎಂ.ಸಿ ಪೋಲೀಸ್ ಠಾಣೆಗಳಿಗೆ ಸೇರಿರುವುದರಿಂದ ಮೂರು ಠಾಣೆಯಿಂದ ಸಂಬಂದಪಟ್ಟವರನ್ನು ಪ್ರಸ್ಥಾಪಿತ ಸ್ಥಳದಲ್ಲಿ ಹುಡುಗರು ಗಾಂಜ ಸೇವನೆ ಮಾಡಿ ಹಾವಳಿ ಮಾಡುತ್ತಿರುವುದನ್ನು ನಿಲ್ಲಿಸಬೇಕು ಎಂದು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗವುದು ಎಂದು ತಿಳಿಸಿದರು. | ನಂದಿನಿ ಲೇಔಟ್, ಮಹಾಲಕ್ಷ್ಮೀ ಲೇಔಟ್, ಎ.ಪಿ.ಎಂ.ಸಿ ಯಾರ್ಡ್ ಪೋಲೀಸ್ ಠಾಣೆ |
| 9. | ಸದಸ್ಯರು ಅ) ಶ್ರೀ ಮಲ್ಲಪ್ಪ ಅವರ ಮನೆಯ ಹತ್ತಿರ ಸ್ಯಾನಿಟರಿ ಲೈನ್ ಸಮಸ್ಯೆಯನ್ನು ಪರಿಹರಿಸಲು ಕೋರಿದರು ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಪ್ರಸ್ತಾವನೆಯನ್ನು ಮಂಡಿಸುತ್ತೇನೆ ಎಂದು ತಿಳಿಸಿದರು.<br>ಆ) ವಿಜಯಾನಂದನಗರದಲ್ಲಿ ಒಳಚರಂಡಿ ವ್ಯವಸ್ತೆಯನ್ನು ಸರಿಪಡಿಸಲು ಕೋರಿದರು. ಇದಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.<br>ಇ) ನಾಗೇಂದ್ರ ರವರು 20x30 ಜಾಗದಲ್ಲಿ ಮನೆಗಳನ್ನು ನಿರ್ಮಾಣ ಮಾಡಿರುವವರಿಗೆ ಎರಡು ಪಟ್ಟು ಹೆಚ್ಚು ಹಣ ಪಾವತಿಸುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಮಾಹಿತಿಯನ್ನು ನೀಡಿದರು.<br>ಉ) ಸದಸ್ಯರು ಗೌತಮನಗರ ಎ.ಪಿ.ಎಂ.ಸಿ ಗೇಟ್ ರಸ್ತೆ ಹತ್ತಿರ, ಕಡಲೆಕಾಯಿ ಮಂಡಿ ಹತ್ತಿರ ಗೋವರ್ದನ್ ಚಿತ್ರ ಮಂದಿರ ಹತ್ತಿರ, ಚಿಕ್ಕೇಗೌಡ ಕಲ್ಯಾಣ ಮಂಟಪದ ಹತ್ತಿರ ಹಾಗೂ ಶಂಕರನಗರ ಮತ್ತು ಗಜಾನನ ಸ್ಲಂ-1 ರಸ್ತೆ ಹತ್ತಿರ ಇರುವ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಕೋರಿದರು ಆದ್ದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸರಿಪಡಿಸಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 10. | ಕಾರ್ಯದರ್ಶಿಗಳು ವಾರ್ಡ್ ವ್ಯಾಪ್ತಿಯಲ್ಲಿ ಜನವರಿ ತಿಂಗಳಲ್ಲಿ ಥಾಂಬರೀಕರಣ ಮಾಡಬೇಕಾಗಿರುವುದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಎಲಾಖೆ ರವರು ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಕೊಳ್ಳು ಹಾಗೂ ಬೆಸ್ಕಾಂ ಅಧಿಕಾರಿಗಳಿಗೆ ಕೇಬಲ್ ಅಳವಡಿಸು ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಬೆಸ್ಕಾಂ ಇಲಾಖೆ |
| 11. | ನಾಗೇಂದ್ರ ಸದಸ್ಯರು ರವರು ಧೀನಬಂಧನ್ ನಗರದ ಹತ್ತಿರ ಜೋತು ಬಿದ್ದಿರುವ ಕೇಬಲ್ಸ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಗಳನ್ನು ಕೋರಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ತೆರವುಗೊಳಿಸಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |

ಕಾರ್ಯದರ್ಶಿಗಳು

18/12/21

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮೋರಪ್ಪನಪಾಳ್ಯ

Scanned with CamScanner